ಅಮರೇಶ ನುಗಡೋಣಿ ಕನ್ನಡದ ಪ್ರಮುಖ ಕಥೆಗಾರರಲ್ಲೊಬ್ಬರು. ರಾಯಚೂರು ಜಿಲ್ಲೆಯ ಸಿರಿವಾರ ತಾಲೂಕಿನ ನುಗಡೋಣಿ ಅವರ ಹುಟ್ಟೂರು. ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡಿ ಪ್ರಸ್ತುತ ನಿವೃತ್ತರು. 'ತಮಂಧದ ಕೇಡು', 'ಮುಸ್ಸಂಜೆಯ ಕಥಾನಕಗಳು', 'ಸವಾರಿ', 'ಬಿಸಿಲಹನಿಗಳು'ಅವರ ಪ್ರಮುಖ ಕಥಾ ಸಂಕಲನಗಳು. 'ಗೌರಿಯರು' ಜನಪ್ರಿಯ ಕಾದಂಬರಿ.

ಮನೆ ಮಾಡಿಕೊಂಡಿದ್ದ ವೇದವತಿ ತನ್ನ ಮನೆಯಲ್ಲೂ ತಾನೇ ಒಂದು ರೀತಿಯಲ್ಲಿ ಒಂಟಿಯಾಗಿದ್ದಳು. ಅಪ್ಪನ ಜತೆಗೆ ಇರಬೇಕೆಂದು ಪ್ರಯತ್ನಿಸಿದಳು. ಅಪ್ಪ 'ನಾನು ಒಂಟಿಯಾಗಿದ್ದೀನಿ ಅಂತ ನೀನು ಬರಬ್ಯಾಡ. ನನ್ನನ್ನು ನಾನು ನೋಡ್ಕೊಳ್ತೀನಿ. ನಿನ್ಗ ನೀನು ಒಂಟಿಯಾಗಿದ್ದೀನಂತ ಅನ್ನಿಸಿದ್ರ ಬಂದಿರು' ಅಂದದ್ದು ಮನಸ್ಸಿಗೆ ಮುಳ್ಳಿನಂತೆ ಚುಚ್ಚಿತ್ತು. ಅಪ್ಪ ಜ್ಯೂನಿಯರ್ ಕಾಲೇಜಿನಲ್ಲಿ ಉಪನ್ಯಾಸಕನಾಗಿ ಮೂವತ್ತೈದು ವರ್ಷಗಳ ಹಿಂದೆಯೇ ಸೇರಿಕೊಂಡಿದ್ದ. ತನ್ನನ್ನು ಓದಿಸಿ, ವಿಶ್ವವಿದ್ಯಾಲಯದಲ್ಲಿ ಪಿ.ಜಿ. ಮಾಡಿಸಲು ಪ್ರೇರೇಪಿಸಿದ. ತನ್ನ ಪ್ರಯತ್ನದಿಂದಲೂ ಪದವಿ ಕಾಲೇಜಿನಲ್ಲಿ ಉಪನ್ಯಾಸಕಳಾಗಿದ್ದಳು. ಅಪ್ಪನಿಗೆ ಅದು ಹೆಮ್ಮೆಯ ವಿಷಯವಾಗಿತ್ತು. ಆದರೆ, ತನ್ನ ಸಾಂಸಾರಿಕ ಜೀವನದ ಬಗ್ಗೆ ಸದಭಿಪ್ರಾಯ ಇರಲಿಲ್ಲ. ಅಮ್ಮನಂತೂ ಕುಸಿದೇ ಹೋಗಿದ್ದಳು. ಅಪ್ಪ, 'ಈ ವಿಷಯದಾಗ ಮಗಳು ಬೇಜವಾಬ್ದಾರಿಯಿಂದ ನಡಕೊಂಡಳು. ಉಣ್ಣಲಿ ನೀನ್ಯಾಕ ಚಿಂತಿ ಮಾಡ್ತಿದ್ದಿ?' ಎಂದು ಗದರಿಸಿದ್ದ. ಅಪ್ಪ ನಿವೃತ್ತಿಯಾದ ಮ್ಯಾಲೆ, ಇನ್ನೂ ಆರೋಗ್ಯವಾಗಿರ್ತಾನೆ ಎಂದು ವೇದವತಿಗೆ ಅನ್ನಿಸಿತ್ತು. ಏನಾಯಿತ್ತೋ ಮೌನವಾದ! ಅದೇ ದಿನಗಳಲ್ಲಿ ಒಮ್ಮೆ ಕರೆದು, 'ವೇದ, ನನ್ಗ ತಿಳದಂಗ ನನ್ನ ಆತ್ಮಕತೆ ಬರೆದಿದ್ದೀನಿ. ಇದನ್ನ ನಿನ್ನ ಕೈಗೆ ಕೊಟ್ಟರ್ತೀನಿ. ನಾನು ಸತ್ತ ಮ್ಯಾಲೆ ಪುಸ್ತಕವಾಗಿ ಪ್ರಕಟಿಸು. ನನ್ನ ಮಾತನ್ನ ನಡಸಿಕೊಡು. ಅಂದಂಗ ಅದನ್ನು ಅಚ್ಚು ಮಾಡಿಸಲು ಎಷ್ಟು ಕರ್ಚು ಬರ್ತದಲ್ಲ ಅದನ್ನ ನಾನೇ ನಿನ್ಗ ಕೊಡ್ತೀನಿ' ಎಂದು ಹೇಳಿದ್ದರು. ಆಗ ವೇದವತಿ ಅಷ್ಟು ಸೀರಿಯಸ್ ಆಗಿ ಅಪ್ಪನ ಮಾತನ್ನು ಕೇಳಿಸಿಕೊಳ್ಳಲಿಲ್ಲ. ಅಪ್ಪ ವಾಚಕರವಾಣಿಗೆ ಪತ್ರಗಳನ್ನು ಬರೆಯುತ್ತಿದ್ದ. ತಾನು ಓದುತ್ತಿದ್ದಳು. ಎಷ್ಟೋ ಸಲ ಓದಿ ಇದನ್ಯಾಕ ಬರಿಬೇಕಿತ್ತು? ನಿಷ್ಟುರ ಕಟ್ಟಿಕೊಳ್ಳಾಕ ಯಾವಾಗನ್ನ ನೋಡು ರೆಡಿ ಇರ್ತಾನ. ಪರಿಚಯಸ್ಥರು ಓದಿ ಬೆನ್ನು ತಟ್ಟುತ್ತಿದ್ದರು ನಿಜ. ಅದರ ಪರಿಣಾಮ ಎಡವಟ್ಟುಗಳಾಗುತ್ತಿದ್ದವು. ಆಗ ಬೆನ್ನು ತಟ್ಟಿದವರು ಯಾರೂ ಹಿಂದಿರುತ್ತಿರಲಿಲ್ಲ. ಅಪ್ಪ ರಿಸ್ಕ್ ತಗೊಳ್ಳಲು ಹಿಂದ ಮುಂದ ನೋಡುತ್ತಿರಲಿಲ್ಲ. 'ವ್ಯಕ್ತಿತ್ವವೇ ಅಂಥದ್ದು! ಬದಲಾಗಲ್ಲ ಬಿಡು. ನಿಭಾಯಿಸಿಕೊಳ್ತಾನ. ಆ ಶಕ್ತಿ ಅವನಲ್ಲಿ ಐತೆ' ಎಂದರು ಮಾದೇವಪ್ಪ. ಈಗ ಅಪ್ಪನ ಆತ್ಮಚರಿತ್ರೆ ಬಿಡುಗಡೆ ಮಾಡಲು ಬರುವವರಿದ್ದರು. ಚಂದ್ರಕಾಂತ ಪಾಟೀಲರು ಮಾತ್ರ ದೃಢ ನಿರ್ಧಾರದಿಂದ ಹೇಳುತ್ತಿದ್ದರು. ನಲವತ್ತು ವರ್ಷಗಳಿಂದಲೂ ಸಡಿಲಾಗದ ಗೆಳೆತನ ಅವರಿಬ್ಬರಲ್ಲಿತ್ತು. ಮಾದೇವಪ್ಪ ಸರ್ಕಾರಿ ನೌಕರಿಯಲ್ಲಿದ್ದರೂ ಆಕ್ಟಿವಿಸ್ಟ್ ಆಗಿದ್ದವರು. ಅಪ್ಪ-ಅವರ ನಡುವಿನ ಮಾತುಕತೆಗಳು ಬಿರುಸಿನಿಂದ ಕೂಡಿರ್ತಿದ್ದವು. ಅಮ್ಮ ಅವರಿಬ್ಬರು ಸೇರಿದ್ರು ಅಂದ್ರೆ ಹೆದರುತ್ತಿದ್ದಳು. 'ನಿಮ್ಮ ತಂದೆದು ಅರಾಜಕ ವ್ಯಕ್ತಿತ್ವ. ಅದಕ್ಕೆ ನಾವಿಬ್ಬರು ಗೆಳೆಯರಾಗಿದ್ದೀವಿ. ಕೂಡಿದಾಗೆಲ್ಲ ಚರ್ಚೆ ಮಾಡ್ತೀವಿ. ನಾವಿಬ್ಬರು ನಿರ್ಮಲ ಮನಸ್ಸಿನ ಸ್ನೇಹಿತರು ವೇದ' ಎಂದು ಹೇಳಿದ್ದು ನೆನಪಿನಲ್ಲಿ ಉಳಿದಿತ್ತು.

ಅಪ್ಪ ಚಿಕ್ಕ ಚಿಕ್ಕ ವಿಷಯಗಳನ್ನು ಪತ್ರಿಕೆಯಲ್ಲಿ ಬರೆಯುತ್ತಿದ್ದರಲ್ಲ, ಬರೆಯುವ ಚಟ ಇತ್ತು. ಆದ್ರೆ ಆತ್ಮಚರಿತ್ರೆ ಬರೆದುಕೊಳ್ಳುತ್ತಾರೆಂದು ಯಾರೂ ಊಹಿಸಿರಲಿಲ್ಲ. 'ನಾನು ಸತ್ತ ಮೇಲೆ ಪ್ರಕಟಿಸಿ' ಎಂದು ಹೇಳಿದ್ದರಿಂದ ವೇದವತಿಗೆ ನಂಬುಗೆಯಿತ್ತು, ಅಪ್ಪ ಇನ್ನೂ ಕಾಲು ಶತಮಾನ ಜೀವಿಸುತ್ತಾರೆ ಎಂದು. ಅದಕ್ಕಾಗಿ ಹಸ್ತಪ್ರತಿ ಪಡೆದು ಬೀರುವಿನಲ್ಲಿ ಇಟ್ಟಿದ್ದಳು. ನಿವೃತ್ತಿ ಹೊಂದುವ ಹಿಂದಿನ ವರ್ಷ, ನಂತರದ ಒಂದು ವರ್ಷ ಅಪ್ಪ ಸಹಜವಾದ ಇರುವಿಕೆಯಿಂದ ಬದಲಾದರು. ಅಮ್ಮ ತೀರಿಕೊಂಡಿದ್ದರಿಂದ ಇರಬೇಕು ಅನ್ನಿಸಿದರೂ ಅದಲ್ಲವೆಂದು ವೇದವತಿಗೆ ಅನ್ನಿಸುತ್ತಿತ್ತು. ಮೇಲಾಗಿ ತನ್ನ ಸಂಸಾರದಲ್ಲಿ ತಲೆದೋರಿದ್ದ ಬಿಕ್ಕಟ್ಟಿನಿಂದ ಅಪ್ಪನ ಕಡೆ ಸರಿಯಾಗಿ ಗಮನ ಕೊಡಲಾಗಲಿಲ್ಲ. ಈಗ್ಗೆ ಎರಡು ವರ್ಷಗಳ